ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲ್ಯೂ-3

**(ದಿನಾಂಕ 18.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಕೆ ಬಿ ಆರ್ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ವಿಲ್ ನಲ್ಲಿ ನನ್ನ ಸಾಕ್ಷಿ ಸಹಿ ಇದೆ. ವಿಲ್ ನ್ನು ಈಗಾಗಲೇ  ನಿ ಪಿ 17 ಎಂದು ಗುರುತಿಸಲಾಗಿದೆ.  ಸಾಕ್ಷಿ ಸಹಿಯನ್ನು ನಿ ಪಿ 17(ಎ) ಎಂದು ಗುರುತಿಸಲಾಯಿತು. ವಿಲ್ ನಲ್ಲಿ ಹಾಲೇಶ್ ಕೂಡ ಸಹಿ ಇದೆ. ಸೌಭಾಗ್ಯಮ್ಮ ಕೂಡ ಸಹಿ ಮಾಡಿರುತ್ತಾರೆ. ಹಾಲೇಶ್ ಸಹಿಯನ್ನು ನಿ ಪಿ 17(ಬಿ) ಮತ್ತು ಸೌಭಾಗ್ಯಮ್ಮನ ಸಹಿಯನ್ನು ನಿ ಪಿ 17(ಸಿ) ಅಂತಾ ಗುರುತಿಸಲಾಯಿತು. ಪತ್ರವನ್ನು ಪ್ರಾಣೇಶ್ ರಾವ್ ಬರೆದಿರುತ್ತಾರೆ. ಪ್ರಾಣೇಶ್ ರವರ ಸಹಿಯನ್ನು ನಿ ಪಿ 17(ಡಿ) ಅಂತ ಗುರುತಿಸಲಾಯಿತು.

**(ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

ಮೂಲ ದಾವಾ ಸಂಖ್ಯೆ 3/2019

ಪಿ ಡಬ್ಲ್ಯೂ-4

**(ದಿನಾಂಕ 18.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಕೆ ಬಿ ಆರ್ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ಪಾಲು ವಿಭಾಗ ಪತ್ರದಲ್ಲಿ ನಮ್ಮ ತಂದೆ ವಿರುಪಾಕ್ಷಪ್ಪ ಬಿ ಸಹಿ ಮಾಡಿರುತ್ತಾರೆ. ನನ್ನ ತಂದೆ ಸಹಿ ಗುರುತಿಸುತ್ತೇನೆ. ಪಾಲು ವಿಭಾಗ ಪತ್ರ ನ್ನು ಈಗಾಗಲೇ ನಿ ಪಿ 20 ಎಂದು ಗುರುತಿಸಲಾಗಿದೆ. ನನ್ನ ತಂದೆಯ ಸಹಿಯನ್ನು ನಿ ಪಿ 20(ಎ) ಎಂದು ಗುರುತಿಸಲಾಯಿತು.

**(ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.